International Journal of Kannada Research
www.kannadajournal.com

ISSN: 2454–5813
IJSR 2016; 2(3): 180-183
© 2016 IJKS
www.kannadajournal.com
Received: 20-05-2016
Accepted: 22-06-2016

**ಅನಿತ ಎಚ್ ಸಿ**
ಕಲಾವಿದೆ ಮತ್ತು ಪಿ ಎಚ್ ಡಿ ಸಂಶೋಧಕರು ದೃಶ್ಯಕಲಾ ವಿಭಾಗ ಮಾನವೀಯ ಮತ್ತು ಸಾಮಾಜಿಕ ವಿಜ್ಞಾನ ನಿಕಾಯ ಜೈನ್ ವಿಶ್ವವಿದ್ಯಾಲಯ. ಬೆಂಗಳೂರು

**ಡಾ. ಸೌಮ್ಯ ಮಂಜುನಾಥ್ ಚವಾಣ್**
ಕಲಾವಿದರು ಮತ್ತು ಸಂಶೋಧಕರು ಮುಖ್ಯಸ್ಥರು, ದೃಶ್ಯಕಲಾ ವಿಭಾಗ ಮಾನವೀಯ ಮತ್ತು ಸಾಮಾಜಿಕ ವಿಜ್ಞಾನ ನಿಕಾಯ ಜೈನ್ ವಿಶ್ವವಿದ್ಯಾಲಯ. ಬೆಂಗಳೂರು.

**Correspondence**
**ಅನಿತ ಎಚ್ ಸಿ**
ಕಲಾವಿದೆ ಮತ್ತು ಪಿ ಎಚ್ ಡಿ ಸಂಶೋಧಕರು ದೃಶ್ಯಕಲಾ ವಿಭಾಗ ಮಾನವೀಯ ಮತ್ತು ಸಾಮಾಜಿಕ ವಿಜ್ಞಾನ ನಿಕಾಯ ಜೈನ್ ವಿಶ್ವವಿದ್ಯಾಲಯ. ಬೆಂಗಳೂರು

# ಸಂಹಾರಮೂರ್ತಿ ರೂಪ ವೈಶಿಷ್ಟ್ಯದಲ್ಲಿ ಶಿವನ ಅಭಿವ್ಯಕ್ತಿ – ಮೈಸೂರು ಶೈಲಿ ಚಿತ್ರಕಲೆ

**ಅನಿತ ಎಚ್ ಸಿ, ಡಾ. ಸೌಮ್ಯ ಮಂಜುನಾಥ್ ಚವಾಣ್**

ದಕ್ಷಿಣ ಭಾರತದ ಸಾಂಪ್ರದಾಯಿಕ ಚಿತ್ರಕಲಾ ಶೈಲಿಗಳಲ್ಲಿ ಒಂದಾದ ಮೈಸೂರು ಶೈಲಿಯು ವಿಜಯನಗರದ ಚಿತ್ರಕಲಾ ಶೈಲಿಯ ಮುಂದುವರೆದ ಕಲಾಪರಂಪರೆಯಾಗಿದೆ. ವಿಜಯನಗರದ ಭಿತ್ತಿಚಿತ್ರಕಲಾ ಶೈಲಿಯ ಹಲವು ಅಂಶಗಳನ್ನು ಮೈಗೂಡಿಸಿಕೊಂಡು ಕಾಗದ ಮತ್ತು ಬಟ್ಟೆಗಳ ಮೇಲೆ ಚಿತ್ರಗಳನ್ನು ರಚನೆ ಮಾಡಿದ್ದಾರೆ. ಮೈಸೂರು ಸಾಂಪ್ರದಾಯಿಕ ಚಿತ್ರಕಲಾ ಶೈಲಿಯಲ್ಲಿ ಪ್ರಮುಖವಾಗಿ ಶೈವ ಮತ್ತು ವೈಷ್ಣವ ಪೌರಾಣಿಕ ಕಥೆಗಳನ್ನು ಮತ್ತು ಕಾರಣಾಗಮ ಶಾಸ್ತ್ರಗಳನ್ನು ಅನುಸರಿಸಿ ಕಲಾಕೃತಿಗಳ ರಚನೆ ಮಾಡಲಾಗಿದೆ. ಪ್ರಸ್ತುತ ಪ್ರಬಂಧದಲ್ಲಿ ಶ್ರೀತತ್ವನಿಧಿ ಎಂಬ ಗ್ರಂಥದಿಂದ ಶಿವನ ಸ್ವರೂಪವನ್ನು ಅಭಿವ್ಯಕ್ತಿಸಿರುವ ಶಿವನಿಧಿ ಭಾಗದಿಂದ ಸಂಹಾರಮೂರ್ತಿ ರೂಪವೈಶಿಷ್ಟ್ಯವನ್ನು ವಿಶ್ಲೇಷಣೆಗಾಗಿ ಆಯ್ದುಕೊಳ್ಳಲಾಗಿದೆ. ಈ ಪ್ರಬಂಧದಲ್ಲಿ 'ಕಾಮದಹನಮೂರ್ತಿ', 'ಕಾಲಾರಿಮೂರ್ತಿ', 'ತ್ರಿಪುರಸಂಹಾರಮೂರ್ತಿ', ಎಂಬ ಶಿವನ ಮೂರು ಸಂಹಾರಮೂರ್ತಿ ಸ್ವರೂಪಗಳನ್ನು ನಿರೂಪಣೆಯ ಶೈಲಿ ಮತ್ತು ಲಕ್ಷಣಗಳನ್ನು ವಿವರಿಸಲಾಗಿದೆ.

**ಪ್ರಮುಖ ಸೂಚಿಕೆ ಪದಗಳು:** ಶಿವ, ಸಾಂಪ್ರದಾಯಿಕ, ಚಿತ್ರಕಲೆ, ಸಂಹಾರಮೂರ್ತಿ, ಮೈಸೂರು, ನಿರೂಪಣೆ, ಪೌರಾಣಿಕ

ಭಾರತೀಯ ಸಾಂಪ್ರದಾಯಿಕ ಚಿತ್ರಕಲೆಗಳಲ್ಲಿ ದೇವಾನುದೇವತೆಗಳನ್ನು ಅಭಿವ್ಯಕ್ತಿಸಿದ್ದು ಧಾರ್ಮಿಕ ಮತ್ತು ಪೌರಾಣಿಕ ಅಂಶಗಳ ಪ್ರೇರಣೆಯಿಂದ ರಚನೆಯಾಗಿವೆ. ಇಂಥಹ ಕಲಾಕೃತಿಗಳು ನಿರೂಪಣೆಯ ಗುಣಹೊಂದಿದ್ದು, ದೃಶ್ಯ ಮಾಧ್ಯಮದ ಮೂಲಕ ಕಥಾನಕಗಳನ್ನು ಪರಿಣಾಮಕಾರಿಯಾಗಿ ನಿರೂಪಿಸುತ್ತವೆ. ಇಲ್ಲಿ 'ನಿರೂಪಣೆ' ಎಂದರೆ ದೃಶ್ಯ ಮತ್ತು ಕಲಾಕೃತಿಗಳು ಘಟನೆಗಳನ್ನು ಅನುಕ್ರಮವಾಗಿ ವಿವರಿಸುವಂತಹ 'ವಿಶೇಷ ಗುಣ'[i] ಎಂದು, 'ಕಲಾಕೃತಿ'ಗಳೆಂದರೆ 'ದೃಶ್ಯ' ಮಾಧ್ಯಮದಲ್ಲಿ ಅಭಿವ್ಯಕ್ತಿಗೊಂಡಿರುವಂತಹ ಚಿತ್ರ ಕಲಾಕೃತಿಗಳೆಂದು[ii] ಅರ್ಥೈಸಿಕೊಳ್ಳಲಾಗಿದೆ. ಈ ಮಾಧ್ಯಮದಲ್ಲಿ ಅಭಿವ್ಯಕ್ತಿಗೊಂಡಿರುವ ಶೈವ ಕಲಾಕೃತಿಗಳನ್ನು ಮುಂದೆ ವಿಶ್ಲೇಷಿಸಲಾಗಿದೆ.

ಕರ್ನಾಟಕದ ಮೈಸೂರು ಸಾಂಪ್ರದಾಯಿಕ ಶೈಲಿಯ ಕಲಾಕೃತಿಗಳು ನಿರೂಪಣಾತ್ಮಕ ಗುಣಗಳಿಂದ ಕೂಡಿದ್ದು, ಧಾರ್ಮಿಕ ಮತ್ತು ಪೌರಾಣಿಕ ವಿಷಯಗಳನ್ನು ಯಥಾರ್ಥವಾಗಿ ನಿರೂಪಿಸುತ್ತವೆ. ಶ್ರೀ ತತ್ವ – ನಿಧಿ[iii] ಹಸ್ತಪ್ರತಿ ಗ್ರಂಥವು ಮೈಸೂರು ಶೈಲಿಯ ಆಕರಗ್ರಂಥವಾಗಿದ್ದು, ದೇವಾನುದೇವತೆಗಳನ್ನು ಶಾಸ್ತ್ರೋಕ್ತವಾಗಿ, ಸಾಂಪ್ರದಾಯಿಕ ಶೈಲಿಯಲ್ಲಿ ಅಭಿವ್ಯಕ್ತಿಸಲಾಗಿದೆ. 3ನೇ ಕೃಷ್ಣರಾಜ ಒಡೆಯರ್ ಅವರಿಂದ ರಚಿತವಾದ ಈ ಗ್ರಂಥದಲ್ಲಿ ಶಿವನನ್ನು ಆಧಾರಿಸಿ ರಚಿಸಿರುವ 'ಶಿವನಿಧಿ' ಗ್ರಂಥದಲ್ಲಿ ಐದುನೂರಾ ಎಪ್ಪತ್ಮೂರು ಶ್ಲೋಕಗಳಿದ್ದು, ಶಿವನ ನೂರಾ ಅರವತ್ತನಾಲ್ಕು ರೂಪ ವೈಶಿಷ್ಟ್ಯತೆಗಳನ್ನು ಚಿತ್ರಕಲಾಕೃತಿಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ಅವುಗಳಲ್ಲಿ ಶಿವನ ಸಂಹಾರಮೂರ್ತಿ ಸ್ವರೂಪಗಳಾದ – 'ಕಾಮದಹನಮೂರ್ತಿ', 'ಕಾಲಾರಿಮೂರ್ತಿ', 'ತ್ರಿಪುರಸಂಹಾರಮೂರ್ತಿ', ಎಂಬ ಮೂರು ಕಲಾಕೃತಿಗಳಲ್ಲಿ ನಿರೂಪಣಾತ್ಮಕ ಅಂಶ ಮತ್ತು ಶಿವನ ಸಾಂಕೇತಿಕ ರೂಪಗಳನ್ನು ಪ್ರಸ್ತುತ ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

**ಶಿವನ ರೂಪ ವೈಶಿಷ್ಟ್ಯತೆಗಳು:** ಶಿವನು ಭಾರತದ ಅತ್ಯಂತ ಪುರಾತನ ದೈವವಾಗಿದ್ದು ಐದು ಸಾವಿರ ವರ್ಷ[iv]ಗಳ ಹಿಂದಿನ ಸಿಂಧೂ ನಾಗರೀಕತೆಯ ಕಾಲದ ಮುದ್ರೆಗಳಲ್ಲಿ ಪಶುಪತಿ ಮತ್ತು ಮಹಾಯೋಗಿಯಾಗಿ ಮೂರ್ತ ರೂಪ[v]ದಲ್ಲಿ ಕಂಡಿದ್ದಾರೆ; ಯಜುರ್ ವೇದ, ಅಥರ್ವ ವೇದ, ಉಪನಿಷದ್, ಶಿವ ಪುರಾಣ, ಮತ್ತು ಶೈವಾಗಮಗಳಲ್ಲಿ, ಶಿವನ ಸಂಪೂರ್ಣ ಸ್ವರೂಪಗಳನ್ನು

ವಿವರಿಸಿದ್ದಾರೆ. ಯಜುರ್ ವೇದದಲ್ಲಿ ದಯಾಮಯನಾಗಿ, ಮಂಗಳಕರವಾದ ರೂಪದಲ್ಲಿ ಮತ್ತು ಶತರುದ್ರೀಯದಲ್ಲಿ ನೂರು ಅವತಾರಗಳಾದ ಭೈರವ, ನಂದೀಶ್ವರ, ಕಿರಾತ ಹೀಗೆ ಹಲವು ಹೆಸರುಗಳಿಂದ ಶಿವನನ್ನು ಕರೆದಿದ್ದಾರೆ. ಇವುಗಳಲ್ಲಿ ಪುರಾಣಗಳಲ್ಲಿರುವ ಶಿವನ ವರ್ಣನೆಯ ಮೊದಲ ಕುರುಹುಗಳನ್ನು ಕಾಣಬಹುದು. ರಾಮಚಂದ್ರ ರಾವ್‌ರವರ ಪ್ರಕಾರ ಶಿವನನ್ನು ಉಪನಿಷತ್‌ಗಳಲ್ಲಿ ಶ್ರೇಷ್ಠ ಜ್ಞಾನಿಯಾಗಿ, ಶ್ರೇಷ್ಠ, ಮಂಗಳಕರ, ತಪಸ್ವಿ, ವರ ನೀಡುವಂತಹ ರೂಪಗಳಲ್ಲಿ, ಹಾಗೆಯೇ ಸಹಸ್ರನಾಮಗಳಿಂದ ಸ್ತುತಿಸಲಾಗಿದೆ. ಶಿವನ ಮೂರ್ತಿಪೂಜೆಯು ಸಿಂಧೂ ನಾಗರೀಕತೆಗಿಂತಲೂ ಮುಂಚಿನ ಅವಧಿಯಿಂದಲೂ ಪ್ರಚಲಿತದಲ್ಲಿತ್ತು. ಭಾರತೀಯ ಶಿಲ್ಪಕಲೆಯಲ್ಲಿ ಶಿವನ ದೈವಿಕ, ಕಲಾತ್ಮಕ ಮತ್ತು ಮೂರ್ತ ಸ್ವರೂಪಗಳನ್ನು ಪ್ರತಿಮಾಶಾಸ್ತ್ರದ ಅಂಶಗಳನ್ನು ಅನುಸರಿಸಿ ಅಭಿವ್ಯಕ್ತಿಸಿರುವುದನ್ನು ಕಾಣುತ್ತೇವೆ. ಭಾರತೀಯ ಭಿತ್ತಿಚಿತ್ರ ಮತ್ತು ಸಾಂಪ್ರದಾಯಿಕ ಚಿತ್ರಕಲೆಯಲ್ಲಿ ಶಿವನ ಅಭಿವ್ಯಕ್ತಿಯು ಬಾದಾಮಿ ಮತ್ತು ಎಲ್ಲೋರಾ ಕೈಲಾಸ ದೇವಾಲಯದಿಂದ ಪ್ರಾರಂಭವಾಗಿ ಹತ್ತೊಂಬತ್ತನೇ ಶತಮಾನದವರೆಗಿನ ಅವಧಿಯಲ್ಲಿ ಅಸ್ತಿತ್ವದಲ್ಲಿತ್ತು ಎಂಬುದಕ್ಕೆ ಸಾಕಷ್ಟು ಪುರಾವೆಗಳು ಸಿಗುತ್ತವೆ. ಪುರಾಣಗಳಲ್ಲಿ ಶಿವನನ್ನು ಅನುಗ್ರಹಮೂರ್ತಿ, ಸಂಹಾರಮೂರ್ತಿ, ನೃತ್ತಮೂರ್ತಿ, ದಕ್ಷಿಣಮೂರ್ತಿ ಮತ್ತು ಇತರೆ ರೂಪಗಳಲ್ಲಿ ಅಭಿವ್ಯಕ್ತಿಸಿದ್ದಾರೆ. ತನ್ನ ಭಕ್ತರಿಗೆ ವರಗಳನ್ನು ನೀಡುವ ಶಿವನನ್ನು ಅನುಗ್ರಹ ಮೂರ್ತಿ ರೂಪದಲ್ಲಿ ಚಿತ್ರಿಸಿದ್ದಾರೆ. ಸಂಹಾರಮೂರ್ತಿ ರೂಪದಲ್ಲಿರುವ ಶಿವನು ಅಸುರರನ್ನು ವಧಿಸುವುದರಿಂದ ಈ ಹೆಸರಿನಿಂದ ಕರೆಯಲಾಗಿದೆ. ಸಂಹಾರಮೂರ್ತಿ ಸ್ವರೂಪದಲ್ಲಿರುವ ಕಾಮದಹನಮೂರ್ತಿಯನ್ನು ಮುಂದೆ ವಿವರಿಸಲಾಗಿದೆ.

**ಕಾಮದಹನಮೂರ್ತಿ**: ಶಿವ ಪುರಾಣದಲ್ಲಿ ನಿರೂಪಿಸಿರುವ ಕಥೆಯ ಪ್ರಕಾರ, ತಾರಕಾಸುರನು ಮೂರು ಲೋಕಗಳನ್ನು ತನ್ನ ವಶಕ್ಕೆ ತೆಗೆದುಕೊಂಡು ಎಲ್ಲ ದೇವ ದೇವತೆಯರನ್ನು ಹೊರಗಟ್ಟಿ ತಾನೇ ಇಂದ್ರನಾಗಿ ರಾಜ್ಯಭಾರ ಮಾಡುತ್ತಿದ್ದನು. ಇವನಿಂದ ಕಷ್ಟಗಳನ್ನು ಅನುಭವಿಸಿದ ಸಮಸ್ತ ದೇವತೆಗಳು ಬ್ರಹ್ಮದೇವನಿಗೆ ಮೊರೆಯಿಟ್ಟು, ತಾರಕಾಸುರನಿಂದ ರಕ್ಷಿಸುವಂತೆ ಬೇಡಿಕೊಂಡರು. ಬ್ರಹ್ಮನ ವರದಾನದಿಂದಲೇ ತಾರಾಕಾಸುರನು ಶಕ್ತಿಯುತವಾಗಿರುವುದರಿಂದ ಬ್ರಹ್ಮರಿಂದ ಅವನ ವಧೆ ಸಾಧ್ಯವಿಲ್ಲ. ಆದರೆ ಈ ಕೆಲಸವು ಶಿವಪುತ್ರನಿಂದ ಸಾಧ್ಯವಿದೆಯೆಂದು ಬ್ರಹ್ಮ ದೇವರು ದೇವತೆಗಳಿಗೆ ಉಪದೇಶಿಸಿದರು. ಆದರೆ ಶಿವನು ದಕ್ಷನ ವಧೆಯ ನಂತರ ಘೋರ ತಪಸ್ಸು ಮಾಡುತ್ತಿರುವುದರಿಂದ, ಶಿವನ ಮನವೊಲಿಸಲು ಕಾಮದೇವನನ್ನು ನಿಯೋಜಿಸುವಂತೆ ಇಂದ್ರನಿಗೆ ಬ್ರಹ್ಮ ದೇವರು ಸಲಹೆ ಮಾಡಿದರು. ಇಂದ್ರನು ಕಾಮದೇವನನ್ನು ಕುರಿತು ಶಿವನ ಧ್ಯಾನವನ್ನು ಭಂಗ ಮಾಡಿ ಪಾರ್ವತಿಯನ್ನು ವರಿಸುವಂತೆ ಮಾಡುವ ಕಾರ್ಯಕ್ಕೆ ಕಾಮನನ್ನು ಕೇಳಿಕೊಂಡರು. ಇದರಂತೆ ಕಾಮನು ತನ್ನ ಪತ್ನಿ ರತಿ ದೇವಿ
ಮತ್ತು ವಸಂತನನ್ನು ಕರೆದುಕೊಂಡು ಶಿವನಿದ್ದಲ್ಲಿಗೆ ಬಂದು ತನ್ನ ಕಾಮಾಸ್ತ್ರಗಳನ್ನು ಶಿವನ ಮೇಲೆ ಪ್ರಯೋಗಿಸತೊಡಗಿದನು. ಈ ಕಾರ್ಯದಿಂದ ಶಿವನ ತಪಸ್ಸಿಗೆ ವಿಘ್ನವಾದುದರಿಂದ ಶಿವನು ಎಚ್ಚರಗೊಂಡು ನೋಡಿದಾಗ ಕಾಮನು ಮತ್ತೊಂದು ಬಾಣವನ್ನು ಪ್ರಯೋಗಿಸಲು ಸಜ್ಜಾಗಿದ್ದುದನ್ನು ಕಂಡನು. ಇದರಿಂದ ಕುಪಿತನಾದ ಶಿವ ತನ್ನ ಮೂರನೇ ಕಣ್ಣಿನ ಅಗ್ನಿಜ್ವಾಲೆಯಿಂದ ಕಾಮನನ್ನು ಸುಟ್ಟು ಬೂದಿಮಾಡಿದನು. ಭಯಭೀತಳಾದ ರತಿದೇವಿಯು ಶಿವನನ್ನು ಕುರಿತು ಪ್ರಾಲಾಪಿಸತೊಡಗುತ್ತಾಳೆ. ದೇವತೆಗಳೆಲ್ಲರು ಶಿವನನ್ನು ಕುರಿತು ಪ್ರಾರ್ಥಿಸಿ ಇದರಲ್ಲಿ ಕಾಮನದೇನು ತಪ್ಪಿಲ್ಲ, ನಮ್ಮ ಕೋರಿಕೆಯ ಮೇರೆಗೆ ಈ ಕಾರ್ಯವನ್ನು ಮಾಡಿದನು ಎಂದು ಶಿವನನ್ನು ಸಮಾಧಾನಿಸಿದರು. ತಾರಕನಿಂದ ತೊಂದರೆಗೊಳಗಾಗಿರುವ ಸಂಗತಿಯನ್ನು ತಿಳಿ ಹೇಳಿ ಅದಕ್ಕೆ ಪರಿಹಾರ ಸೂಚಿಸಲು ಕೋರಿದರು. ಶಿವನ ಮನಸ್ಸಿನ ಪರಿವರ್ತನೆಯಾಗಿ ಮುಂದೆ ಶಿವನು ಪಾರ್ವತಿಯನ್ನು ಮದುವೆಯಾಗಿ, ಶಿವಕುಮಾರನ ಜನನವಾಗಿ ಅವನಿಂದ ತಾರಕಾಸುರನ ವಧೆಯಾಗುತ್ತದೆ. ಈ ಘಟನೆಯು 'ಕಾಮದಹನಮೂರ್ತಿ' ಚಿತ್ರದಲ್ಲಿ ಅತ್ಯಂತ ಪ್ರಭಾವ ಶಾಲಿಯಾಗಿ ಮೂಡಿಬಂದಿದೆ.

ಕಾಮನನ್ನು ಶಾಸ್ತ್ರೋಕ್ತವಾಗಿ ಚಿತ್ರಿಸಿದ್ದಾರೆ. ಕಾಮನು ತನ್ನ ವಾಹನ ಹಸಿರು ಗಿಳಿಯ ಮೇಲೆ ಕುಳಿತು ಕಬ್ಬಿನ ಜಲ್ಲೆಯ ಬಿಲ್ಲನ್ನು ಮಾಡಿಕೊಂಡು ಐದು ಪುಷ್ಪಗಳಿಂದ ಕೂಡಿದ ಬಾಣಗಳನ್ನು ಶಿವನ ಮೇಲೆ ಪ್ರಯೋಗ ಮಾಡುತ್ತಿದ್ದಾನೆ. ಶಿವನು ಕಮಲದ ಮೇಲೆ ಕುಳಿತು ಬಲಗೈ ಅಭಯ ಮುದ್ರೆಯಿಂದ, ಮತ್ತು ಎಡಗೈ ವರದ ಮುದ್ರೆಯಲ್ಲಿರುವಂತೆ ಚಿತ್ರಿಸಿದ್ದಾರೆ. ಅಭಯ ಮುದ್ರೆಯು ತನ್ನನ್ನು ನಂಬಿರುವವರನ್ನು ಕಾಪಾಡುತ್ತೇನೆ ಎಂಬುದನ್ನು, ವರದ ಮುದ್ರೆಯು ತನ್ನ ಭಕ್ತರಿಗೆ ಕೊಡುವ ವರದಾನವನ್ನು ಸಾಂಕೇತಿಕವಾಗಿ ತೋರುವಂತಿದೆ. ಶಿವನ ಹಿಂದಿನ ಕೈಗಳಲ್ಲಿ ಜಿಂಕೆ ಮತ್ತು ಚಾಣವನ್ನು ಹಿಡಿದಿರುವಂತೆ ಅಭಿವ್ಯಕ್ತಿಸಿದ್ದಾರೆ. ಶಿವನು ಜಟಾಧಾರಿಯಾಗಿದ್ದು, ತಲೆಯಲ್ಲಿ ಗಂಗೆಯನ್ನು ಧರಿಸಿದ್ದು, ಮಂದಹಾಸದಿಂದ ಕೂಡಿದ ಮುಖ ಮತ್ತು ಹಣೆಯಲ್ಲಿ ಮೂರನೇ ಕಣ್ಣನ್ನು ಚಿತ್ರಿಸಿದ್ದಾರೆ. ಶಿವನನ್ನು ಸೂಕ್ತ ಆಭರಣಗಳಿಂದ ಅಲಂಕರಿಸಿದ್ದಾರೆ. ಮುಂದಿನ ಭಾಗದಲ್ಲಿ ಕಾಲಾರಿಮೂರ್ತಿ ರೂಪ ವೈಶಿಷ್ಟ್ಯದಲ್ಲಿರುವ ಶಿವನನ್ನು ವಿವರಿಸಲಾಗಿದೆ.

**ಕಾಲಾರಿಮೂರ್ತಿ**: ಶಿವ ಪುರಾಣಗಳಲ್ಲಿ ಬರುವ ಕಥೆಯ ಪ್ರಕಾರ, ಋಷಿ ಮೃಕಂಡು ಮತ್ತು ಅವನ ಪತ್ನಿ ಮನಸ್ವಿನಿಗೆ ಮಕ್ಕಳಿರಲಿಲ್ಲವಾದ್ದರಿಂದ ದೇವತೆಯ ಮೊರೆಹೋದರು. ಅವರ ಪ್ರಾರ್ಥನೆ ಮೆಚ್ಚಿದ ದೇವರು, ದೀರ್ಘ ಆಯಸ್ಸಿನ ಅಲ್ಪ ಬುದ್ಧಿಯ ಮಗ ಮತ್ತು ಅಲ್ಪ ಆಯಸ್ಸಿನ ಬುದ್ಧಿವಂತ ಮಗ: ಈ ಇಬ್ಬರಲ್ಲಿ ಒಬ್ಬರನ್ನು ಆಯ್ದುಕೊಳ್ಳುವಂತೆ ಸೂಚಿಸಿದರು. ಋಷಿ ಮುನಿಯು ಎರಡನೆಯ ಮಗನೇ ಇರಲೆಂದು ಕೋರಿಕೊಂಡರು. ಅದರಂತೆ ಕೇವಲ ಹದಿನಾರು ವರ್ಷ ಆಯಸ್ಸಿನ ಮಗನು ಜನಿಸಿದನು. ಅವನಿಗೆ ಮಾರ್ಕಂಡೇಯ ಎಂದು ಕರೆದರು. ಮಾರ್ಕಂಡೇಯನು ಬುದ್ಧಿವಂತನು ಮತ್ತು ಯೋಗ್ಯ ಮಗನಾಗಿ ಬೆಳೆದು ಶಾಸ್ತ್ರ, ವಿದ್ಯೆಗಳಲ್ಲಿ ಪಾರಂಗತನಾದನು. ಹದಿನಾರು ವರ್ಷ ವಯಸ್ಸಾದಾಗ ಅವನ ಸಾವು ಸಮೀಪಿಸಿತೆಂದು ತಂದೆತಾಯಿಯರು ದುಃಖಿತಪ್ತರಾದರು. ಈ ವಿಷಯ ತಿಳಿದ ಮಾರ್ಕಂಡೇಯನು ಎಲ್ಲಾ ತೀರ್ಥ ಸ್ಥಳಗಳನ್ನು ಸಂದರ್ಶಿಸಿ ದೇವಾನುದೇವತೆಗಳ ಪೂಜೆ ಮಾಡಲು ಪ್ರಾರಂಭಿಸಿದನು. ಕೊನೆಯಲ್ಲಿ ಶಿವನನ್ನು ಲಿಂಗದ ರೂಪದಲ್ಲಿ ಪೂಜಿಸತೊಡಗಿದನು. ಪೂಜೆಯ ಮಧ್ಯದಲ್ಲಿ ಯಮನು ಬಂದು ನಿನ್ನ ಕಾಲವಾಯಿತು; ಯಮಲೋಕಕ್ಕೆ ಹೊರಡಲು ಸಿದ್ಧನಾಗು ಎಂದು ಅಪ್ಪಣೆ ಮಾಡಿದನು. ಮಾರ್ಕಂಡೇಯನು ನನ್ನ ಪೂಜೆ ಅರ್ಧವಾಗಿದೆ ಸ್ವಲ್ಪ ಹೊತ್ತು ತಡೆ ಬರುತ್ತೇನೆ ಎಂದು ಯಮನನ್ನು ಕಾಯಲು ಹೇಳಿದನು. ಇದರಿಂದ ಕೋಪಗೊಂಡ ಯಮನು ಮಾರ್ಕಂಡೇಯನನ್ನು ಎಳೆದುಕೊಂಡು ಹೋಗಲು ಮುಂದುವರೆದನು. ಮಾರ್ಕಂಡೇಯನು ಶಿವನನ್ನು ರಕ್ಷಿಸುವಂತೆ ಮೊರೆಯಿಟ್ಟನು. ತನ್ನ ಭಕ್ತನ ಪ್ರಾರ್ಥನೆ ಕೇಳಿದ ಶಿವನು, ಮಾರ್ಕಂಡೇಯನು ಪೂಜಿಸುತ್ತಿದ್ದ ಲಿಂಗವನ್ನು ಸೀಳಿಕೊಂಡು ಹೊರಬಂದು, ಸಿಟ್ಟಿನಿಂದ ಯಮನನ್ನು ತನ್ನ ಕಾಲಿನಿಂದ ಒದ್ದು ತನ್ನ ಭಕ್ತನನ್ನು ರಕ್ಷಿಸುತ್ತಾನೆ. ಯಮನಿಗೆ ತನ್ನ ತಪ್ಪಿನ ಅರಿವಾಗಿ

ಅಲ್ಲಿಂದ ಹೊರಟುಹೋಗುತ್ತಾನೆ. ಶಿವನು ಮಾರ್ಕಂಡೇಯನನ್ನು ಕೈಲಾಸಕ್ಕೆ ಕರೆದುಕೊಂಡು ಹೋದನು. ಶಿವನ ಭಕ್ತನಾಗಿ ಮಾರ್ಕಂಡೇಯನು ಕೈಲಾಸದಲ್ಲಿ ಚಿರಂಜೀವಿಯಾಗಿ ಉಳಿಯುತ್ತಾನೆ.

ಶಿವನಿಧಿ ಗ್ರಂಥದಲ್ಲಿ ಚಿತ್ರಿಸಿರುವ ಕಾಲಾರಿಮೂರ್ತಿ ಚಿತ್ರ ಕೆಳ ಭಾಗದಲ್ಲಿ ಬಾಲಕ ಮಾರ್ಕಂಡೇಯನು ರುದ್ರಾಕ್ಷವನ್ನು ಧರಿಸಿರುವಂತೆ, ಶಿವಲಿಂಗಕ್ಕೆ ನಮಸ್ಕರಿಸಿ ಪೂಜಿಸುತ್ತಿರುವಂತೆ ತೋರಿಸಿದೆ. ಪಕ್ಕದಲ್ಲಿ ಯಮನು ನಿಂತಿದ್ದಾನೆ. ಶಿವನು ತನ್ನ ಆಯುಧ ತ್ರಿಶೂಲದಿಂದ ಯಮನನ್ನು ಕೊಲ್ಲುತ್ತಿರುವಂತೆ ಚಿತ್ರಿಸಲಾಗಿದೆ. ಶಿವನ ಜೊತೆಗೆ ದೇವಿಯೂ ಆಸೀನಳಾಗಿದ್ದಾಳೆ. ಶಿವನ ಜಟೆಯಲ್ಲಿ ಚಂದ್ರನನ್ನು ಧರಿಸಿದ್ದು, ಕೈಯಲ್ಲಿ ಭರ್ಜಿ, ಚಾಣ, ಹಿಡಿದಿರುವಂತೆ ತೋರಿಸಿದೆ. ಶಿವನ ಮುಖವು ಸಿಟ್ಟಿನಿಂದ ಕೂಡಿದ್ದು, ಬಲಗಾಲು ಲಿಂಗದ ಮೇಲಿರುವಂತೆ, ಬಗ್ಗಿದ ಎಡಗಾಲು ಯಮನ ಎದೆಯ ಮೇಲೆ ಒತ್ತಿ ಹಿಡಿದಿರುವಂತೆ ಅಭಿವ್ಯಕ್ತಿಸಿದ್ದಾರೆ. ಶಾಸ್ತ್ರಾನುಸಾರವಾಗಿ ಶಿವನನ್ನು ಕೆಂಪು ವರ್ಣದಲ್ಲಿ, ಮಾರ್ಕಂಡೇಯನನ್ನು ಬಿಳಿ ಬಣ್ಣದಲ್ಲಿ, ಮತ್ತು ಯಮನನ್ನು ಕಪ್ಪು ವರ್ಣದವನಾಗಿ ಚಿತ್ರಿಸಬೇಕು ಅಲ್ಲದೆ ಯಮನು ತನ್ನ ವಾಹನ ಕೋಣನ ಮೇಲೆ ಕುಳಿತಿರುವಂತೆ ಚಿತ್ರಿಸಿರಬೇಕು. ಆದರೆ ಶಿವನಿಧಿ ಗ್ರಂಥದಲ್ಲಿ ಈ ಲಕ್ಷಣಗಳು ಕಾಣಿಸುವುದಿಲ್ಲ.

**ತ್ರಿಪುರಸಂಹಾರಮೂರ್ತಿ**: ತಾರಾಕಾಸುರನ ಮೂವರು ಮಕ್ಕಳು ಚಿನ್ನ, ಬೆಳ್ಳಿ, ಮತ್ತು ಕಬ್ಬಿಣದಿಂದ ನಿರ್ಮಿಸಿದ ಕೋಟೆಗಳನ್ನು ಕಟ್ಟಿಕೊಂಡು ರಾಜ್ಯವಾಳುತ್ತಿದ್ದರು. ಈ ಮೂರು ಕೋಟೆಗಳನ್ನು ಒಂದೇ ಕಡೆ ಸೇರಿಸಿ, ಒಂದೇ ಬಾಣದಿಂದ ಮಾತ್ರ ನಾಶ ಮಾಡಲು ಸಾಧ್ಯ ಎಂಬ ಬ್ರಹ್ಮನ ವರದಾನವಿದ್ದುದರಿಂದ ಅವರನ್ನು ಯಾರಿಂದಲೂ ಸೋಲಿಸಲು ಶಕ್ಯವಿರಲಿಲ್ಲ. ಈ ವರದಾನದಿಂದ ಕೊಬ್ಬಿದ ಆಸುರರು ದೇವತೆಗಳಿಗೆ ತೊಂದರೆ ಕೊಡಲು ಪ್ರಾರಂಭಿಸಿದರು. ಇಂದ್ರನು ತನ್ನ ವಜ್ರಾಯುಧದಿಂದ ಆಕ್ರಮಣ ಮಾಡಿದರೂ ಆಸುರರನ್ನು ಯಾವ ರೀತಿಯಿಂದಲೂ ಮಣಿಸಲು ಸಾಧ್ಯವಾಗಲಿಲ್ಲ. ದೇವತೆಗಳೆಲ್ಲರೂ ಬ್ರಹ್ಮನನ್ನು ಪ್ರಾರ್ಥಿಸಿ ಆಸುರರನ್ನು ಕೊಲ್ಲುವ ಉಪಾಯ ತಿಳಿಸಿ ಎಂದು ಕೋರಿಕೊಂಡರು. ಬ್ರಹ್ಮನು ಆಸುರರನ್ನು ಒಂದೇ ಬಾಣದಿಂದ ಕೊಲ್ಲಲು ಸಾಧ್ಯ ಮತ್ತು ಈ ಕೆಲಸ ಮಹಾದೇವನಿಂದಲೇ ಆಗಬೇಕು; ಹಾಗಾಗಿ ಶಿವನನ್ನೇ ಪ್ರಾರ್ಥಿಸಿ ಎಂದು ಹೇಳಿ ದೇವತೆಗಳನ್ನು ಶಿವನ ಬಳಿ ಕಳಿಸಿದರು. ದೇವತೆಗಳ ಪ್ರಾರ್ಥನೆಗೆ ಮಣಿದು ಶಿವನು ನಿಮ್ಮೆಲ್ಲರ ಅರ್ಧ ಶಕ್ತಿಯನ್ನು ನೀಡಿದರೆ ಮಾತ್ರ ಆಸುರರಿಗಿಂತ ಬಲಶಾಲಿಯಾಗಿ ಅವರನ್ನು ಕೊಲ್ಲಲು ಸಾಧ್ಯವೆಂದು ಹೇಳಿದನು. ಅದರಂತೆ ದೇವತೆಗಳೆಲ್ಲರೂ ತಮ್ಮ ತಮ್ಮ ಅರ್ಧ ಶಕ್ತಿಯನ್ನು ಶಿವನಿಗೆ ನೀಡಿದಾಗ ಶಿವನು **'ಮಹಾದೇವ'** ನಾಗಿ ಆಸುರರ ಮೇಲೆ ಯುದ್ಧಕ್ಕೆ ಹೊರಡುತ್ತಾನೆ. ಬಾಣವಾಗಿ ವಿಷ್ಣು, ಅದರ ತುದಿಯಲ್ಲಿ ಅಗ್ನಿ, ಮತ್ತು ಬಾಣದ ಹಿಂದಿನ ಪುಕ್ಕದಲ್ಲಿ ಯಮನು ಸೇರಿಕೊಂಡು ವೇದಗಳೇ ಬಿಲ್ಲಾಗಿ, ಸಾವಿತ್ರಿಯೇ ಬಿಲ್ಲಿನ ದಾರವಾಗಿದ್ದು, ಬ್ರಹ್ಮನು ರಥದ ಸಾರಥಿಯಾಗಿ ಯುದ್ಧಕ್ಕೆ ಹೊರಡುತ್ತಾರೆ. ಹೀಗೆ ಒಂದೇ ಬಾಣದಲ್ಲಿ ಮೂರು ದೇವತೆಗಳು ಸೇರಿಕೊಂಡು ಆಸುರರ ಮೂರೂ ರಾಜ್ಯಗಳನ್ನು ಒಂದೇ ಬಾಣದಿಂದ ನಾಶಮಾಡುತ್ತಾರೆ. ಈ ಘಟನೆಯ ನಂತರ ಶಿವನನ್ನು ತ್ರಿಪುರಾರಿಮೂರ್ತಿ ಅಥವಾ ತ್ರಿಪುರಾಂತಕಮೂರ್ತಿ ಎಂಬ ಹೆಸರಿನಿಂದ ಕರೆಯುತ್ತಾರೆ.

ಶಿವನಿಧಿಯಲ್ಲಿ ಚಿತ್ರಿತವಾಗಿರುವ ತ್ರಿಪುರಾರಿಮೂರ್ತಿಯು ಸಮಪಾದದಲ್ಲಿ ನಿಂತಿರುವನು. ಜಟಾಧಾರಿಯಾಗಿ, ಚಂದ್ರನನ್ನು ಮುಡಿಯಲ್ಲಿರಿಸಿಕೊಂಡು, ನಾಲ್ಕು ಕೈಗಳಲ್ಲಿ ಜಿಂಕೆ, ಕೊಡಲಿ, ಬಿಲ್ಲಿ ಮತ್ತು ಬಾಣವನ್ನು ಹಿಡಿದು ಪಕ್ಕದಲ್ಲಿ ಉಮಾ ಸಹಿತನಾಗಿ ನಿಂತಿದ್ದಾನೆ. ಸರ್ವಾಲಂಕಾರಭೂಷಿತನಾಗಿರುವ ಮಹಾದೇವನು ಕಿವಿಯಲ್ಲಿ ಕುಂದಲಗಳನ್ನು ಧರಿಸಿದ್ದಾನೆ. ಹಿಂಬದಿಯಲ್ಲಿ ವಾಸ್ತುಕಲೆಯ ಅಲಂಕಾರವನ್ನು ಕಾಣುತ್ತೇವೆ. ಚಿತ್ರದಲ್ಲಿ ಕಾರ್ಯ ಮುಗಿದ ನಂತರದಲ್ಲಿರುವ ಶಿವನನ್ನು ಚಿತ್ರಿಸಿರುವುದರಿಂದ ಸಮಚಿತ್ತದಲ್ಲಿರುವಂತೆ ಚಿತ್ರಿಸಲಾಗಿದೆ.

**ಉಪಸಂಹಾರ**

ಶಿವನಿಧಿ ಗ್ರಂಥದಲ್ಲಿ ಚಿತ್ರಿತವಾಗಿರುವ ಶಿವನ ಕಲಾಕೃತಿಗಳು ರೇಖಾ ಪ್ರಧಾನವಾಗಿದ್ದು ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿ ಅಭಿವ್ಯಕ್ತಿಗೊಂಡಿದ್ದು ಶೈಲಿಯ ಲಕ್ಷಣಗಳನ್ನು ಕಾಣುತ್ತೇವೆ. ಶಿವನ ಲಕ್ಷಣಗಳನ್ನು ಶೈವ ಕಾರಣಾಗಮದಲ್ಲಿನ ವರ್ಣನೆಯನ್ನು ಪ್ರಧಾನವಾಗಿ ಅನುಸರಿಸಲಾಗಿದೆ. ಕಲಾಕೃತಿಗಳಲ್ಲಿ ವರ್ಣಗಳ ಬಳಕೆ ಮಿತಿಯಲ್ಲಿದ್ದು ಕೆಂಪು, ಹಳದಿ, ಹಸಿರು, ಕಪ್ಪು ಬಣ್ಣಗಳಿಂದ ಆಕಾರಗಳನ್ನು ಚಿತ್ರಿಸಿದ್ದಾರೆ. ಸಂಹಾರಮೂರ್ತಿ ರೂಪವೈಶಿಷ್ಟ್ಯಕ್ಕೆ ತಕ್ಕ ಅಲಂಕಾರ, ಆಭರಣಗಳು, ಆಯುಧಗಳು, ಮತ್ತು ಕಾರ್ಯದ ಪ್ರಾಮುಖ್ಯತೆಯನ್ನು ತೋರಿಸುವ ಶಿವನ ಭಂಗಿಯಿಂದ ಕಲಾಕೃತಿಗಳು ಕಥಾವಸ್ತುವನ್ನು ಪ್ರಭಾವಶಾಲಿಯಾಗಿ ನಿರೂಪಿಸುತ್ತವೆ. ಒಂದೇ ದೃಶ್ಯದಲ್ಲಿ ಪೂರ್ಣ ಕಥೆಯನ್ನು ಅಭಿವ್ಯಕ್ತಿಸಿರುವುದಕ್ಕೆ ಕಾರಣವೇನೆಂದರೆ, ಚಿತ್ರ ಕಲಾವಿದನು ವೀಕ್ಷಕರಿಗೆ ಪೌರಾಣಿಕ ಕಥೆಗಳ ಮಾಹಿತಿ ಅಥವಾ ಅರಿವು ಮೊದಲೇ ಇದೆಯೆಂದು ಭಾವಿಸಿದ್ದು, ಈ ಶೈಲಿಯಲ್ಲಿ ಕಲಾಕೃತಿಗಳ ರಚನೆ ಮಾಡಿರುವ ಉದ್ದೇಶವು ಸಫಲವಾಗುತ್ತದೆ. ಮೈಸೂರು ಶೈಲಿಯ ಈ ಕಲಾಕೃತಿಗಳು ನಿರೂಪಣಾತ್ಮಕ ಕಲಾಕೃತಿಗಳಿಗೆ ಮತ್ತು ಲಕ್ಷಣಗಳಿಗೆ ಉತ್ತಮ ನಿದರ್ಶನಗಳಾಗಿವೆ. ಇಲ್ಲಿ ಬರುವ ಪೌರಾಣಿಕ ಕಥೆಗಳ ಸಾರಾಂಶವನ್ನು ಶಿವ ಪುರಾಣ ಗ್ರಂಥದಿಂದ ಆಯ್ದುಕೊಳ್ಳಲಾಗಿದೆ.

ಈ ಮೊದಲೇ ತಿಳಿಸಿದಂತೆ ಕಲಾಕೃತಿಗಳು ಒಂದೇ ದೃಶ್ಯದಲ್ಲಿ ಕಥೆಯ ಸಾರಾಂಶವನ್ನು ನಿರೂಪಿಸುವ ಸಾಮರ್ಥ್ಯ ಹೊಂದಿವೆ. ಕಥಾಪಾತ್ರವರ್ಗದ ಸುತ್ತಲೂ ಕಥೆಯನ್ನು ಹೆಣೆದಿರುವುದರಿಂದ ಇಲ್ಲಿ ಪಾತ್ರಗಳು ಪ್ರಮುಖ ಪಾತ್ರ ವಹಿಸಿವೆ. ಶಿವನು ಕಲಾಕೃತಿಗಳ ಕೇಂದ್ರ ಬಿಂದುವಾಗಿದ್ದು ಅವನ ಸುತ್ತಲೂ ಕಥೆಯನ್ನು ಸೃಷ್ಟಿಸಲಾಗಿದೆ. ಶೈವ ಧರ್ಮವನ್ನು ಈ ಕಲಾಕೃತಿಗಳ ಮೂಲಕ ಜನಸಾಮಾನ್ಯರಿಗೆ ತಿಳಿಸುವ ಮತ್ತು ಪ್ರಚಾರ ಮಾಡುವ ಉದ್ದೇಶವೂ ಕೂಡಾ ಇಲ್ಲಿದೆ. ಪೌರಾಣಿಕ ಕಥೆಗಳ ಮೂಲ ಉದ್ದೇಶವು ಜನಸಾಮಾನ್ಯರನ್ನೂ ಮೋಕ್ಷದತ್ತ ಕೊಂಡ್ಯೊಯುವ ಮಹತ್ವದ ಕೆಲಸವೂ ಕೂಡಾ ಈ ಕಲಾಕೃತಿಗಳ ರಚನೆಯಲ್ಲಿ ಕಂಡುಬರುತ್ತದೆ. ಈ ಹಿನ್ನೆಲೆಯಲ್ಲಿ ಕಲಾಕೃತಿಗಳನ್ನು ಅಧ್ಯಯನ ಮಾಡಿದಾಗ ಅದರ ನಿರೂಪಣಾತ್ಮಕ ಅಂಶಗಳು ಸ್ಪಷ್ಟವಾಗುತ್ತವೆ. ಅಲ್ಲದೆ ಪುರಾಣಗಳು ಭಕ್ತಿಮಾರ್ಗವನ್ನು ತಿಳಿಸುವುದರಿಂದ, ಶಿವನನ್ನೇ ಪ್ರಧಾನವಾಗಿ ಆರಾಧಿಸಲು ಮತ್ತು ಶೈವ ಧರ್ಮವನ್ನು ಅನುಸರಿಸಲು ಈ ಕಲಾಕೃತಿಗಳು ಜನಸಾಮಾನ್ಯರಿಗೆ ದಾರಿದೀಪವಾಗಿವೆಯೆಂದು ತಿಳಿಯಬಹುದು.

ಮೈಸೂರು ಸಾಂಪ್ರದಾಯಿಕ ಶೈಲಿಯಲ್ಲಿರುವ ಕಲಾಕೃತಿಗಳು ಆ ಶೈಲಿಯ ತಾಂತ್ರಿಕ ಅಂಶಗಳನ್ನು ಹೊಂದಿರುವುದಲ್ಲದೆ, ನಿರೂಪಣಾತ್ಮಕ ಶೈಲಿಗೆ ಉತ್ತಮ ಉದಾಹರಣೆಗಳಾಗಿವೆ. ಕಲಾಕೃತಿಗಳಲ್ಲಿನ ಸಾಂಕೇತಿಕ ಅಂಶಗಳನ್ನು ವರ್ಣಗಳು, ಮತ್ತು ಹಿನ್ನೆಲೆಯಲ್ಲಿ ಚಿತ್ರಿಸಿರುವ ವಾಸ್ತು ಕಲೆಯ ಅಂಶಗಳೆಂದು ಗುರುತಿಸಬಹುದು. ವರ್ಣಗಳು, ಆಯುಧಗಳು, ಮತ್ತು ಸಂಯೋಜನಾ ಅಂಶಗಳನ್ನು ಪಾತ್ರದ ಕಾರ್ಯಕ್ಕನುಗುಣವಾಗಿ ಚಿತ್ರಿಸಿರುವುದು ಇಲ್ಲಿ ಪ್ರಮುಖವಾಗಿ ಕಾಣಬಹುದು. ಪೌರಾಣಿಕ ಕಥೆಗಳು ನಡೆದ ಸಂದರ್ಭಗಳು ಹೊರಾಂಗಣವನ್ನು ಸೂಚಿಸಿದರೆ ಕಲಾಕೃತಿಗಳು ಒಳಾಂಗಣವನ್ನು ತೋರಿಸುತ್ತಿವೆ. ಈ ಅಂಶಗಳು ಕಲಾಕೃತಿಯನ್ನು ಚಿತ್ರಿಸಿದ ಕಲಾವಿದನ ಕ್ರಿಯಾಶಕ್ತಿಯನ್ನು

ಆಧಾರಿಸಿದಂತೆ ರಚನೆಯಾಗಿರುವುದನ್ನು ಗಮನಿಸಲಾಗಿದೆ. ಇಲ್ಲಿ ಕಥಾವಸ್ತು ಮತ್ತು ಪಾತ್ರಗಳು ಪ್ರಮುಖ ಪಾತ್ರ ವಹಿಸುವುದರಿಂದ ಉಳಿದ ಅಂಶಗಳು ಅವುಗಳನ್ನು ಸಮರ್ಥಿಸುವ ಕೆಲಸ ಮಾಡುತ್ತವೆ.



ಚಿತ್ರ – ೦೧. ಕಾಮದಹನಮೂರ್ತಿ. ಮೈಸೂರು ಸಾಂಪ್ರದಾಯಿಕ ಚಿತ್ರಕಲಾ ಶೈಲಿ



ಚಿತ್ರ – ೦೨. ಕಾಲಾರಿಮೂರ್ತಿ. ಮೈಸೂರು ಸಾಂಪ್ರದಾಯಿಕ ಚಿತ್ರಕಲಾಶೈಲಿ



ಚಿತ್ರ – ೦೩. ತ್ರಿಪುರಾಂತಕಮೂರ್ತಿ. ಮೈಸೂರು ಸಾಂಪ್ರದಾಯಿಕ ಚಿತ್ರಕಲಾಶೈಲಿ

---

[ು] ಪಿಮೆಂಟಾ, ಶೆರ್ಲಿನ್ ಮತ್ತು ಪೂವಯ್ಯ, ರವಿ. ಆನ್ ಡಿಫೈನಿಂಗ್ ವಿಶ್ಯುಲ್ ನರೇಟೀವ್ಸ್. ಡಿಸೈನ್ ಥಾಟ್ಸ್. ೨೦೧೦. ಪು – ೨೭.

[ಬ] ಅದೇ, ಪು – ೨೭.

[ಬು] ಒಡೆಯರ್, ಮುಮ್ಮಡಿ ಕೃಷ್ಣರಾಜ. ಶ್ರೀ–ತತ್ವ–ನಿಧಿ. ಶಿವನಿಧಿ. (ಸಂ) ರಮೇಶ, ಕೆ ವಿ. ಓರಿಯಂಟಲ್ ರಿಸರ್ಚ ಇನ್ಸ್ಟಿಟ್ಯೂಟ್. ಮೈಸೂರು. (೧೭೯೪–೧೮೬೮), ೨೦೦೪.

[ುತಿ] ವರದಪಾಂಡೆ, ಎಮ್ ಎಲ್. ಮೈಥಾಲಜಿ ಆಫ್ ಶಿವ & ಶಕ್ತಿ. ಅಭಿನವ್. ದೆಹಲಿ. ೨೦೧೩. ಪು – ೧೧.

[ತಿ] ರಾವ್, ರಾಮಚಂದ್ರ ಎಸ್ ಕೆ. ದೇವತ– ರೂಪ – ಮಾಲ. ಸಂಪುಟ – ೪. ವಾಸು. ೨ನೇ ಮುದ್ರಣ. ದೆಹಲಿ. ೨೦೧೩. ಪು – ೧.

**ಆಧಾರಗ್ರಂಥಗಳು**


೧. ಸಂ, ಶಾಸ್ತ್ರಿ, ಜೆ ಎಲ್. ಏನ್ಸಿಯಂಟ್ ಇಂಡಿಯನ್ ಟ್ರಡಿಷನ್ ಆಂಡ್ ಮೈಥಾಲಜಿ. ಸಂಪುಟ ೧,೨,೩,೪,೫, ಮೋತಿಲಾಲ್ ಬನಾರಸಿದಾಸ್. ೧೯೭೦. ೨೦೦೯ ಪುನರ್ ಮುದ್ರಣ. ದಹಲಿ.

೨. ಒಡೆಯರ್, ಮುಮ್ಮಡಿ ಕೃಷ್ಣರಾಜ. ಶ್ರೀ ತತ್ವ ನಿಧಿ, ಸಂಪುಟ – ೩. ಶಿವನಿಧಿ. (ಸಂ) ರಮೇಶ್, ಕೆ ವಿ. ಓರಿಯಂಟಲ್ ರಿಸರ್ಚ ಇನ್ಸ್ಟಿಟೂಟ್. ಮೈಸೂರು. ೨೦೦೪.

೩. ರಾವ್, ಗೋಪಿನಾಥ್ ಟಿ ಎ. ಎಲಿಮೆಂಟ್ಸ್ ಆಫ್ ಐಕೊನೊಗ್ರಫಿ. ಸಂಪುಟ– ೨, ಭಾಗ ೧, ಲಾ ಪ್ರಿಂಟಿಂಗ್ ಹೌಸ್. ಮದ್ರಾಸ್. ೧೯೧೬.

೪. ವರದಪಾಂಡೆ, ಎಮ್ ಎಲ್. ಮೈಥಾಲಜಿ ಆಫ್ ಶಿವ & ಶಕ್ತಿ. ಅಭಿನವ್ ದೆಹಲಿ. ೨೦೧೩.

೫. ರಾವ್, ರಾಮಚಂದ್ರ ಎಸ್ ಕೆ. ದೇವತ– ರೂಪ – ಮಾಲ. ಸಂಪುಟ – ೪. ವಾಸು. ೨ನೇ ಮುದ್ರಣ. ದೆಹಲಿ. ೨೦೧೩.

೬. ಪೊದ್ದಾರ್, ಹನುಮಾನ್ ಪ್ರಸಾದ್. ಕನ್ನಡ ಅನುವಾದ – ವೇಲಣಕರ್. ಕೀರ್ತನಾಚಾರ್ಯ ಲಕ್ಷ್ಮಣದಾಸ. ಶಿವಪುರಾಣ. ಗೀತಾ ಪ್ರೆಸ್. ಗೋರಕ್‌ಪುರ್. ೨೦೧೨.

೭. ಗುಪ್ತ, ಎಸ್ ಪಿ ಮತ್ತು ಅಸ್ತಾನ, ಶಶಿ ಪ್ರಭ. ಎಲಿಮೆಂಟ್ಸ್ ಆಫ್ ಇಂಡಿಯನ್ ಆರ್ಟ್. ಪ್ರಿಂಟ್ ವರ್ಲ್ಡ. ನ್ಯೂ ದೆಹಲಿ. ೨೦೦೯.

೮. ಪಿಮೆಂಟಾ, ಶೆರ್ಲಿನ್ ಮತ್ತು ಪೂವಯ್ಯ. ರವಿ. ಆನ್ ಡಿಫೈನಿಂಗ್ ವಿಶ್ಯುಲ್ ನರೇಟೀವ್ಸ್. ಡಿಸೈನ್ ಥಾಟ್ಸ್. ೨೦೧೦.

೯. ದೆಹೇಜಿಯ, ವಿದ್ಯಾ. ಡಿಸ್ಕೋರ್ಸ ಇನ್ ಅರ್ಲಿ ಬುದ್ಧಿಸ್ಟ್ ಆರ್ಟ್. ಮುನ್ಶಿರಾಮ್ ಮನೋಹರ್‌ಲಾಲ್. ನ್ಯೂ ದೆಹಲಿ. ೧೯೯೭.